ಒತ್ತಾಯಿಸುತ್ತಿದ್ದಾಗ ಅಜ್ಜಿ ಸಿಡುಕುತ್ತ 'ಅಯ್ಯೋ, ಹುಡುಗಿ!... ಪ್ರತಿದಿನ ಕೇಳಿದ ಕತೆಯನ್ನೇ ಅದೇನು ಅಂತಾ ಕೇಳುತ್ತೀಯಾ? ನಾನು ಇವತ್ತು ನಿನಗೆ ಹೊಸ ಕತೆ ಹೇಳ್ತೀನಿ... 'ಬೇಡ... ಬೇಡ... ನನಗೆ ಅದೇ ರಾಜಕುಮಾರನ ಕತೆಯೇ ಬೇಕು' ಎಂದು ಹಟ ಹಿಡಿಯುತ್ತಿದ್ದೆ. ಆಗ ಅಜ್ಜಿಯಮ್ಮ ನನ್ನನ್ನು ಮೃದುವಾಗಿ ತಟ್ಟುತ್ತಾ ಅದೇ ಕತೆಯನ್ನು ಪ್ರಾರಂಭಿಸುತ್ತಿದ್ದಳು... ಒಂದು ಕಾಲದಲ್ಲಿ ಒಬ್ಬ ರಾಜನಿದ್ದ. ಆತ ನಾಲ್ಕು ಮದುವೆಗಳನ್ನು ಮಾಡಿಕೊಂಡರೂ ಅವನಿಗೆ ಪುತ್ರ ಭಾಗ್ಯ ದಕ್ಕಲಿಲ್ಲ. ಆತ ತನ್ನ ನಾಲ್ಕನೆಯ ಹೆಂಡತಿಯನ್ನು ಬಹುವಾಗಿ ಪ್ರೀತಿಸುತ್ತಿದ್ದ. ಇದನ್ನು ನೋಡಿ ಉಳಿದ ಮೂವರು ಹೆಂಡತಿಯರು ಉರಿದು ಬೀಳುತ್ತಿದ್ದರು. ಒಂದು ದಿನ ಆ ನಾಲ್ಕನೆಯ ಹೆಂಡತಿ 'ತಾನು ತಾಯಿಯಾಗುತ್ತಿದ್ದೇನೆ' ಎಂಬ ಸಂಗತಿಯನ್ನು ರಾಜನಿಗೆ ತಿಳಿಸಿದಳು. ಸಂತೋಷಗೊಂಡ ರಾಜ ಹೆಂಡತಿಯ ತೃಪ್ತಿಗಾಗಿ ತನ್ನ ಖಜಾನೆಯನ್ನೇ ತೆರೆದಿಟ್ಟ. ನಾಲ್ಕನೆಯ ಹೆಂಡತಿಗೆ ಯಾವುದೇ ಕೊರತೆ ಕಾಡಲಿಲ್ಲ. ದೇವರೇ... ದೇವರೇ ಎನ್ನುತ್ತಲೇ ಆ ಶುಭರಾತ್ರಿ ಬಂದೇ ಬಿಟ್ಟಿತು. ಆ ರಾಣಿ ಸುಂದರ ರಾಜಕುಮಾರನಿಗೆ ಜನ್ಮ ನೀಡಿದಳು. ಆದರೆ ಆ ಖುಷಿಯನ್ನು ಆಕೆಗೆ ಸವಿಯಲಾಗಲಿಲ್ಲ. ಆಕೆ ಕೆಲ ಕ್ಷಣದಲ್ಲೇ ಮರಣಿಸಿದಳು. ಉಳಿದ ಮೂವರು ರಾಣಿಯರಿಗೆ ಅವಕಾಶ ತಾನಾಗಿಯೇ ಒಲಿದುಬಂತು. ಕೂಡಲೇ ಅವರು ರಾಜನಿಗೆ 'ರಾಣಿ ಸತ್ತ ಮಗುವಿಗೆ ಜನ್ಮ ನೀಡಿದ್ದಾಳೆ' ಎಂದು ಹೇಳಿ ಕಳಿಸಿದರು. ಆ ರಾತ್ರಿಯೇ ಮಗುವನ್ನು ಕಾಡಿಗೆ ಸಾಗಿಸಿ ಬಚ್ಚಿಡುವ ವ್ಯವಸ್ಥೆ ಮಾಡಿದರು.

★★★

ಅರ್ಧ ರಾತ್ರಿ ಕಳೆದ ನಂತರ ಪುಷ್ಪಕ ವಿಮಾನದ ಮೂಲಕ ಆ ಕಾಡಿನಲ್ಲಿ ಇಳಿದ ಅಪ್ಸರೆಯರು ಅಲ್ಲಿ ಅತ್ಯಂತ ಮೋಹಕವಾದ ಮಗುವನ್ನು ಕಂಡು ಅದರ ಸೌಂದರ್ಯಕ್ಕೆ ಮಾರುಹೋದರು. ಆ ಮಗು ಚಿನ್ನದ ಕೂದಲು ಹೊಂದಿತ್ತು. ಅದರ ಕಣ್ಣುಗಳು ವಜ್ರದಿಂದ ಮಾಡಿದಂತಿದ್ದವು. ಆ ಅಪ್ಸರೆಯರ ರಾಣಿ ಮಗುವನ್ನು ಎತ್ತಿ ಮಡಿಲಲ್ಲಿ ಇರಿಸಿಕೊಂಡು ತನ್ನ ಸ್ನಿಗ್ಧ ಮತ್ತು ಮೃದು ರೆಕ್ಕೆಗಳೊಳಗೆ ಮುಚ್ಚಿಕೊಂಡುಬಿಟ್ಟಳು. ಮತ್ತೆ... ಆ ಪುಷ್ಪಕ ವಿಮಾನ ಹಾರಿಹೋಯಿತು.

ಪ್ರತಿದಿನ ಅರ್ಧರಾತ್ರಿ ಹೊತ್ತಿಗೆ ಅಪ್ಸರೆಯರು ಆ ರಾಜಕುಮಾರನನ್ನು ನಗರದ ತಿರುಗಾಟಕ್ಕಾಗಿ ಕರೆದುಕೊಂಡು ಬರುತ್ತಾರೆಂದು ಅಂದು ನನಗೆ ತಿಳಿಯಿತು. ಹೀಗೆ... ದಿನಗಳು ಕಳೆಯುತ್ತಾ ಆ ರಾಜಕುಮಾರ ಹದಿನೆಂಟು ವರ್ಷದ ಯುವಕ ಆಗಿಬಿಟ್ಟ. ಆತ ಬಹಳ ದಯಾಳು ಆಗಿದ್ದ. ಅವನು ರಾತ್ರಿ ಹನ್ನೆರಡು ಗಂಟೆಗೆ ಪುಷ್ಪಕ ವಿಮಾನದಲ್ಲಿ ಕುಳಿತು ನಗರದ ಪ್ರದಕ್ಷಿಣೆಗೆ ಬಂದಾಗ ಅವನ ತಲೆಯ ಕೂದಲಿನಿಂದ ಸ್ವರ್ಣ ಕಿರಣಗಳು ಹೊರಸೂಸಿ ಅದರ ಪ್ರಕಾಶದಿಂದ ಇಡೀ ನಗರವೇ ಝಗಮಗಿಸುತ್ತಿತ್ತು. ಆತ ಬಡವರ ಮನೆಗಳಿಗೆ ಹೋಗುತ್ತಿದ್ದ. ಅವರ ಕಷ್ಟ ಸುಖಗಳನ್ನು ಆಲಿಸುತ್ತಿದ್ದ. ಆಗ ಅವನ ಕಣ್ಣುಗಳಿಂದ ಅಸಲಿ ಮುತ್ತುಗಳು ಉದುರಲಾರಂಭಿಸುತ್ತಿದ್ದವು. ಜನರು ಅವುಗಳನ್ನು ಹೆಕ್ಕಿಕೊಂಡು ರಾಜಕುಮಾರನಿಗೆ ಹೃದಯ ತುಂಬಿ ಹರಸುತ್ತಿದ್ದರು. ಆತ ಮುಗುಳ್ನಗುತ್ತ ಪ್ರತಿಯೊಬ್ಬ ವ್ಯಕ್ತಿಯನ್ನು ನೋಡುತ್ತಿದ್ದರೆ ಅವನ ಸುಂದರ ಗುಲಾಬಿ ಬಣ್ಣದ ತುಟಿಗಳ ಮೇಲೆ ಪರಿಮಳಭರಿತ ಹೂಗಳು ಅರಳುತ್ತಿದ್ದವು. ಆಗ ನಗರದ ಪ್ರತಿಯೊಂದು ರಸ್ತೆಗಳು ಆ ಹೂಗಳಿಂದ ತುಂಬಿ ಹೋಗುತ್ತಿದ್ದವು. ಆ ರಾಜಕುಮಾರ ಯಾರಾದರೂ ಕಾಯಿಲೆ ಮನುಷ್ಯನನ್ನು ನೋಡಿದಾಗ ಕೂಡಲೆ ತನ್ನ ತಲೆಯ ಮೇಲಿಂದ ಒಂದು ಚಿನ್ನದ ಕೂದಲನ್ನು ಕಿತ್ತು ತೆಗೆದು ರೋಗಿಯ ಶರೀರವನ್ನು ಅದರಿಂದ ಮೆಲ್ಲನೆ ಸವರಿಬಿಡುತ್ತಿದ್ದ. ಆ ಕಾಯಿಲೆ ಮನುಷ್ಯ ಕೂಡಲೆ ಗುಣಮುಖವಾಗಿಬಿಡುತ್ತಿದ್ದ.

ಎಲ್ಲರಿಗೂ ಎಲ್ಲ ಸಂತೋಷವನ್ನು ಹಂಚಿ ಮುಂಜಾವಿನ ಮೊದಲ ಕಿರಣ ಮೂಡುವ ಹೊತ್ತಿಗೆ ಅಪ್ಸರೆಯರೊಂದಿಗೆ ರಾಜಕುಮಾರ ತನ್ನ ದೇಶಕ್ಕೆ ಹಿಂತಿರುಗಿ ಹೋಗಿ ಬಿಡುತ್ತಿದ್ದ.

ನಾನು ಕನಸಿನ ಲೋಕದ ಈ ಪರಿಮಳಭರಿತ ಹೂಗಳನ್ನು ಹೆಕ್ಕಿ ನನ್ನ ಚಿಕ್ಕ ಲಂಗದ ಜೋಳಿಗೆಯಲ್ಲಿ